<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>

<u>ಹಗರಿಬೊಮ್ಮನಹಳ್ಳಿ</u>

ಸಿ ಸಿ ನಂ. **479/2024**

<u>ಸಾಕ್ಷಿಗೆ ದಿನಾಂಕ 24-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 6 P.W.: 4

| | | |
|---|---|---|
| ಹೆಸರು | : | ಪರಸಪ್ಪ |
| ತಂದೆಯ ಹೆಸರು | : | ಮಲ್ಲಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಮಸಾರಿ ನೆಲ್ಲುಕುದರಿ ಗ್ರಾಮ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಆರೋಪಿತರು ನನಗೆ ಸಂಬಂಧಿಕರು ಇರುತ್ತಾರೆ. ಚಾಸಾ-**1** ಮತ್ತು **4** ನನ್ನ ಮಕ್ಕಳು, ಚಾಸಾ-**5** ನನ್ನ ಹೆಂಡತಿ.

ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ, ಆರೋಪಿತರು ನನ್ನ ಮಕ್ಕಳ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಜೀವಬೆದರಿಕೆ ಹಾಕಿಲ್ಲ, ನನ್ನ ಮಗನಿಗೆ ಚಪ್ಪಲಿಯಿಂದ ಹೊಡೆದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ದಿಃ 30-03-2024 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಚಾಸಾ-8 ರವರ ಟ್ರಾಕ್ಟರನ್ನು ನಮ್ಮ ಹೊಲಕ್ಕೆ ಟ್ರೈಲರ್ ಹೊಡೆಯಲು ಚಾಸಾ-4 ರವರು ಬಾಡಿಗೆಗೆ ಕೇಳಿಕೊಂಡಿದ್ದು ಅವರು ಚಾಸಾ-7 ರವರ ಮೂಲಕ ಸದರಿ ವಾಹನವನ್ನು ಕಳುಹಿಸಿಕೊಟ್ಟಿದ್ದು ನನ್ನ ಮಕ್ಕಳಾದ ಚಾಸಾ-1, 4 ಹಾಗೂ ಟ್ರಾಕ್ಟರ್ ಚಾಲಕ ಚಾಸಾ-7 ರವರು ಸೇರಿ ನಮ್ಮ ಹೊಲಕ್ಕೆ ಟ್ರಾಕ್ಟರಿನಲ್ಲಿ ಹೋಗಿರುತ್ತಾರೆಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನ ನಂತರ ಚಾಸಾ-1 ಮತ್ತು 4 ರವರು ಅಳುತ್ತಾ ಮನೆಗೆ ಬಂದಾಗ ನಾನು ಅವರಿಗೆ ವಿಚಾರಿಸಲಾಗಿ ಆ ದಿನ ಬೆಳಿಗ್ಗೆ 9 ಗಂಟೆ ಸುಮಾರಿಗೆ ಟ್ರಾಕ್ಟರ್ ಹೊಡೆಯುವ ಸಮಯದಲ್ಲಿ 1ನೇ ಆರೋಪಿ ಏಕಾಏಕಿ ಬಂದು ನಮ್ಮ ಜಮೀನಿನಲ್ಲಿರುವ ಟೋಮ್ಯಾಟೋ ಸಾಲುಗಳನ್ನು ಟ್ರಾಕ್ಟರಿನಿಂದ ಮುರಿದಿರುತ್ತೀರಿ ಅಂತಾ ಹೇಳಿ ನಮಗೆ ಅವಾಚ್ಯ

ಶಬ್ದಗಳಿಂದ ಬೈದಿರುತ್ತಾರೆ, ನಮ್ಮನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ನಿಲ್ಲಿಸಿ ಕಲ್ಲುಗಳಿಂದ ಹಲ್ಲೆ ಮಾಡಿರುತ್ತಾರೆ, 3 ನೇ ಆರೋಪಿ ಚಾಸಾ-4 ರವರ ಮೇಲೆ ಚಪ್ಪಲಿಯಿಂದ ಹಲ್ಲೆ ಮಾಡಿರುತ್ತಾರೆಂದು ನನಗೆ ತಿಳಿಸಿದರೆಂದರೆ ಸರಿಯಲ್ಲ.

ದಿಃ31-03-2024 ರಂದು ಬೆಳಿಗ್ಗೆ 9 ಗಂಟೆ ಸುಮಾರಿನಲ್ಲಿ ಚಾಸಾ-1 ರವರು ಹೆಚ್ ಬಿ ಹಳ್ಳಿಗೆ ಹೋಗುತ್ತಿರುವಾಗ ಆರೋಪಿತರು ನಮ್ಮ ಮನೆ ನಾಶವಾಲೀ ಎಂದು ಹೇಳುತ್ತಾ ಅವನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಚಾಸಾ-1 ರವರಿಗೆ ಸಿಟ್ಟು ಬರುವಂತೆ ಮಾಡಿದ್ದು ಚಾಸಾ-1 ರವರು ಅದರಿಂದ ಮನನೊಂದು ಪೆಟ್ರೋಲನ್ನು ತನ್ನ ಮೇಲೆ ಹಾಕಿಕೊಂಡು ಬೆಂಕಿ ಹಚ್ಚಿಕೊಂಡಿರುತ್ತಾನೆಂದರೆ ಸರಿಯಲ್ಲ. ಚಾಸಾ-1 ರವರಿಗೆ ನಾವು ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ಘಟನೆಯ ಕುರಿತು ದಿಃ 03-04-2024 ರಂದು ನಿಪಿ-12 ರಂತೆ ನಾನು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ಆ ಕಾರಣದಿಂದ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ